# ಸ್ಮೃತಿಕೆಯ ಹುಡುಕಾಟಕ್ಕೆ ನೃತ್ಯ–ಚಿತ್ರಕಲೆಯ ಆಸರೆ

ಒಡಿಸ್ಸಿ ನೃತ್ಯಕಲಾವಿದೆ ಕ್ಷಮಾ ರಾವ್ ನೃತ್ಯ ಮತ್ತು ಚಿತ್ರಕಲಾ ಕ್ಷೇತ್ರದಲ್ಲಿ ಆಸಕ್ತಿಯಿಂದ ತೊಡಗಿಸಿಕೊಂಡವರು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಕೋಟ ಶಿವರಾಮ ಕಾರಂತರ ಮಗಳಾದರೂ ತಂದೆಯ ಪ್ರಭಾವಳಿಯನ್ನು ಮೀರಿ ತಮ್ಮದೇ ಆದ ವ್ಯಕ್ತಿತ್ವವನ್ನು ರೂಪಿಸಿಕೊಂಡವರು; ನೃತ್ಯ ಕ್ಷೇತ್ರದಲ್ಲಿ ಸಾರ್ಥಕತೆಯನ್ನು ಕಂಡುಕೊಂಡವರು. ಬದುಕಿನಲ್ಲಿ ಎದುರಾದ ಏರಿಳಿತಗಳಿಗೆ ನೃತ್ಯವು ಸಾಥಿಯಾಗಿ, ಆಧಾರವಾಗಿ ನಿಂತಿದೆ ಎನ್ನುವುದು ಅವರ ಅನುಭವದ ಮಾತು. ‘ನೃತ್ಯವೆಂಬುದು ನನ್ನ ಅಂತರಂಗದ ಭಾವನೆಗಳಿಗೆ, ಅಂತರಂಗದಲ್ಲಿರುವ ಸೌಂದರ್ಯದ ಪರಿಕಲ್ಪನೆಗೆ ಭಾಷ್ಯವಾಗಿದೆ’ ಎಂದು ಪ್ರತಿಪಾದಿಸುವ ಕ್ಷಮಾ ರಾವ್; ಹುಟ್ಟಿದ್ದು 1950ರ ಜನವರಿ 5ರಂದು. ಬಾಲ್ಯದ ಶಿಕ್ಷಣ ಪಡೆದಿದ್ದು ಪುತ್ತೂರಿನ ಬಾಲವನದಲ್ಲಿ. ಉಡುಪಿಯಲ್ಲಿ ಕಾಲೇಜು ಶಿಕ್ಷಣ ಪಡೆದು, ಕೆ.ವಿ. ಪದ್ಮನಾಭ ರಾವ್ ಅವರನ್ನು ಮದುವೆಯಾಗಿ ಚೆನ್ನೈಗೆ ತೆರಳಿದ ಬಳಿಕ, ಅವರ ಬದುಕು ಕಲಾಲೋಕದಲ್ಲಿ ನೆಲೆ ನಿಂತಿತು. ನಂತರ ಬೆಂಗಳೂರಿನಲ್ಲಿ ನೆಲೆಸಿ ‘ನೃತ್ಯಶಿಲ್ಪ’ ಎಂಬ ಶಿಕ್ಷಣ ಸಂಸ್ಥೆಯನ್ನು ನಡೆಸಿ, ನೂರಾರು ವಿದ್ಯಾರ್ಥಿಗಳಿಗೆ ಪಾಠ ಮಾಡಿದರು. ಪ್ರಸ್ತುತ ನೃತ್ಯಕ್ಕೆ ಸಂಬಂಧಿಸಿದ ಚಿತ್ರಕಲಾ ಪ್ರದರ್ಶನಕ್ಕೆ ಸಜ್ಜಾಗುತ್ತಿರುವ ಕ್ಷಮಾ ರಾವ್ ಅಂತರಂಗದ ಮಾತುಗಳು ‘ಮಯೂರ’ದ ‘ಲಲಿತ ಮಂಟಪ’ದಲ್ಲಿವೆ.

ಕೋಡಿಬೆಟ್ಟು ರಾಜಲಕ್ಷ್ಮಿ

◆ **ನೃತ್ಯ, ಚಿತ್ರಕಲೆ ಮತ್ತು ಸಾಹಿತ್ಯದ ಒಡನಾಟದೊಂದಿಗೆ ನೀವು ಬೆಳೆದು ಬಂದಿರಿ. ನಿಮಗೆ ಬಾಲ್ಯದಲ್ಲಿ ದೊರೆತ ಶಿಕ್ಷಣದ ಕ್ರಮವೂ ವಿಭಿನ್ನವಾದುದು. ಆ ನೆನಪುಗಳನ್ನು ಹಂಚಿಕೊಳ್ಳಬಹುದಾ?**

ಮಕ್ಕಳು ತೀರಾ ಎಳೆಯ ವಯಸ್ಸಿನಲ್ಲಿ ಶಾಲೆಗೆ ಹೋಗಿ ಅಲ್ಲಿ ನಾಲ್ಕು ಗೋಡೆಗಳ ಮಧ್ಯೆ ಪ್ರಶ್ನೋತ್ತರ ಬಾಯಿಪಾಠ ಮಾಡುವ ರೀತಿಯಲ್ಲಿ ಕಲಿಯುವುದು ಅಪ್ಪನಿಗೆ ಇಷ್ಟವಿರಲಿಲ್ಲ. ಬಾಲ್ಯದಲ್ಲಿ ನಮ್ಮ ಮನೆಯ ಹಿತ್ತಿಲು ಸುಮಾರು ಆರು ಎಕರೆ ವ್ಯಾಪ್ತಿಯಷ್ಟಿತ್ತು. ಆ ಪರಿಸರವನ್ನೇ ಅವಲೋಕಿಸಿ ಮಕ್ಕಳು ಕಲಿಯಬೇಕು ಎಂಬುದು ಅವರ ಇರಾದೆ. ಇಟಲಿಯ ಮರಿಯ ಮೋಂಟೆಸ್ಸರಿ ಅವರ ಕಲಿಕಾ ಮಾದರಿಯನ್ನು ಅಪ್ಪ ಇಷ್ಟಪಟ್ಟಿದ್ದರು. ಪುತ್ತೂರಿನ ‘ಬಾಲವನ’ದಲ್ಲಿ ಆ ಮಾದರಿಯಲ್ಲಿ ಶಾಲೆಯನ್ನು ಆರಂಭಿಸಿದರು. ಆಗಿನ ಕಾಲದಲ್ಲಿ ಅಂತಹ ಪ್ರಯೋಗಶೀಲ ಕಲಿಕೆಗೆ ಯಾರೂ ಮುಂದೆ ಬರಲಿಲ್ಲ. ಸ್ವತಃ ತಮ್ಮ ಮಕ್ಕಳೇ ಆ ರೀತಿಯಲ್ಲಿ ಕಲಿಯಲಿ ಎಂದು ಅಪ್ಪ ನಮಗೆಲ್ಲ ಅದೇ ಮಾದರಿಯಲ್ಲಿ ಶಿಕ್ಷಣ ನೀಡಿದ್ದರು. ಮಕ್ಕಳು ಆಟವಾಡುತ್ತಾ ಕಲಿಯಬೇಕು ಎನ್ನುವುದನ್ನು ಇಂದು ಎಲ್ಲರೂ ಒಪ್ಪುತ್ತಿದ್ದಾರೆ. ಅಲ್ಲಿ ಬುದ್ಧಿಯ ವಿಕಾಸಕ್ಕೆ ಅವಕಾಶ ಹೆಚ್ಚು. ಹಕ್ಕಿಗಳನ್ನು ನೋಡುವುದು, ಅವುಗಳ